ಶ್ರೀ ಜೆ. ಎಸ್. ಅಮ್ಮಣ್ಣವರ್.—ಮುಂಬಯಿ ಭಾಗದಲ್ಲಿ ಸರಕಾರದ ಪ್ರಕಟಣೆಗಳು ಜನರಿಗೆ ಸಿಗಲು ಬಹಳ ಚೆನ್ನಾಗಿ ವ್ಯವಸ್ಥೆ ಮಾಡಿದ್ದಾರೆ. ಅದರಂತೆ ನಮ್ಮ ರಾಜ್ಯ ಸರಕಾರದಲ್ಲೂ ಏಕೆ ವ್ಯವಸ್ಥೆ ಮಾಡಬಾರದು ?

ಶ್ರೀ ಎ. ಆರ್. ಬದರಿನಾರಾಯಣ.—ಅಲ್ಲಿ ಯಾವ ರೀತಿ ಇದೆ ಎನ್ನುವುದು ಗೊತ್ತಿಲ್ಲ. ಮುಂಬಯಿಯಲ್ಲಿ ಯಾವ ರೀತಿ ವ್ಯವಸ್ಥೆ ಇದೆ ಎನ್ನುವುದನ್ನು ತಿಳಿದುಕೊಂಡು ಆ ನಂತರ ಇದನ್ನು ನೋಡೋಣ.

REGULARISATION OF UNAUTHORISED LANDS IN NORTH KANARA DISTRICT

368. Sri V. M. GHADI (Haliyal).—

Will the Minister for Revenue be pleased to state:—

(*a*) the number of applications for regularisation under the provisions of Land Revenue (Regularisation of Unauthorised Occupation of Lands) Rules, 1970 received in the North Kanara District;

(*b*) the number of such cases in which requests for regularisation were refused, with grounds of rtfusal (Talukwise information may be furnished);

(*c*) the number of such cases in which lands have been regularised in favour of the encroachers (Talukwise information may be furnished);

(*d*) the number of cases, if any, in which the lands are granted to persons other than the encroachers and the reasons for such grants (Talukwise information may be furnished);

(*e*) the number of such cases still pending, the reasons therefor and duration of pendency (Talukwise);

(*f*) whether the Government is aware that due to failure of revenue officials to ascertain the duration of encroachment by local enquiry in the absence of peakpahani and proceedings against the encroachers by the Forest Department, etc., the genuine encroachers are not able to get their lands regularised;

(*g*) if so, the action Government has taken or would take to remove the difficulties of genuine encroachers?

Sri N. HUTCHAMASTHY GOWDA (Minister for Revenue).—

(*a*) 4967.

(*b*) to (*e*) A statement giving the requisite information is appended.

(*f*) No.

(*g*) Does not arise.

STATEMENT

Taluk	The number of cases in which requests for regularisation of unauthorised occupation were refused with grounds for refusal.	The number of cases in which the lands have been regularised in favour of the encroachers.	The number of cases in which lands are granted to persons other than encroachers and the reasons for such grants.	The number of cases still pending, the reasons therefor and duration of pendency.
1	2	3	4	5
Karwar	40. Encroachments were made after 1st July 1968	Nil	Nil	64. The lands have been notified for acquisition under the land acquisition Act and some are forest lands which have not yet been released in favour of Revenue Department for disposal. The duration of pendency is between 3 months to one year.
Ankola	120. Encroachments were made after 1st July 1968 and the applicants have	Nil	Nil	634. The lands have been notified for acquisition under the land acquisition Act and some lands have not yet been released by the Forest Department.

		withdrawn their applications.			The duration of pendency is between 3 months to 1½ years.
Kumta		Nil	Nil	Nil	47. These cases are under enquiry. The duration of pendency is between 3 months to one year.
Honnavar	47.	Since encroachments were made after 1st July 1968 in 14 cases and there was no actual encroachments in the remaining cases.	Nil	Nil	723. Some cases have been referred to Forest Department. Some cases come under Land Acquisition under the Land Acquisition Act. Some are under enquiry and some are pending issue of final orders. The pendency is between 3 months to one year.
Bhatkal		Nil	Nil	Nil	156. Cases come under the notified area for acquisition under the Land Acquisition Act. The duration of pendency is between 3 months to one year.
Sirsi	6.	Since the encroachments were after 1st July 1968.	Nil	Nil	1071. Encroachments are on un-released Forest lands, and some cases are under enquiry. The pendency is between 3 months to 1½ years.
Siddapur	101.	Encroachments are after 1st July 1968.	2	Nil	367. Encroachments are on un-released forest lands and some cases are under enquiry. The pendency is between 3 months to 1½ years.
Yellapur	281.	Encroachments are after 1st July 1968.	1	Nil	692. Cases are under enquiry at various stages and some are awaiting for final orders. Duration of pendency is between 3 months and 2 years.

1		2	3	4	5
Mundgod	30.	Encroachments are after 1st July 1968.	1	Nil	212. Some encroachments are on unreleased forest lands and some are under enquiry. Duration is between 3 months to 1½ years.
Haliyal	10.	Encroachments are after 1st July 1968.	Nil	Nil	75. Some encroachments are on the unreleased Forest lands and some are under enquiry. Duration is between 3 months to one year.
Supa	231.	As the encroachments were from the Game Sanctuary Area and from the Forest area which the Forest Department did not agree to release.	Nil	Nil	48. under enquiry.

ಶ್ರೀ ವಿ. ಎಂ. ಘಾಡಿ.—ಉತ್ತರದಲ್ಲಿ ಹೇಳಿರುವ ಪಟ್ಟಿಯಂತೆ ಇಲ್ಲಿ ಕೊಟ್ಟಿರುವ ಫಾರೆಸ್ಟು ಲ್ಯಾಂಡುಗಳನ್ನು ರೆಗ್ಯುಲರೈಸ್ ಮಾಡಿ ಇನ್ನೆಷ್ಟು ದಿವಸಗಳಲ್ಲಿ ಅವರಿಗೆ ಕೊಡುತ್ತೀರಿ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇರತಕ್ಕ ನೀತಿ ಫಾರೆಸ್ಟ್ ಲ್ಯಾಂಡುಗಳನ್ನು ಎಲ್ಲಿ ಬಿಟ್ಟುಕೊಟ್ಟಿದ್ದಾರೋ ಅವುಗಳನ್ನು ಮತ್ತೆ ವಾಪಸು ಪಡೆದು ಅಫೋರೆಸ್ಟೇಷನ್ ಮಾಡಬೇಕೆಂದು ಮತ್ತು ಹೆಚ್ಚು ಕಾಡುಗಳನ್ನು ಬೆಳಸಬೇಕೆಂದೂ ಇದೆ. ಇಷ್ಟೇ ಅಲ್ಲ ಇನ್ನು ಮುಂದೆ ಫಾರೆಸ್ಟು ಲ್ಯಾಂಡುಗಳನ್ನು ರಿಲೀಸು ಮಾಡಲು ಆಗುವುದಿಲ್ಲ.

ಶ್ರೀ ವಿ. ಎಂ. ಘಾಡಿ.—ಸರಕಾರದವರು ಇಂತಹ ಫಾರೆಸ್ಟು ಲ್ಯಾಂಡುಗಳನ್ನು ಕೊಡದೇ ಇರುವುದರಿಂದಾಗಿ ಇಲ್ಲಿನ ಜನ ಚಳುವಳಿ ಮಾಡಲು ಅವಕಾಶವಾಗುತ್ತದೆ. ಆಗ ಇದು ಒಂದು ದೊಡ್ಡ ಪ್ರಶ್ನೆಯಾಗಿ ಇದನ್ನು ತಪ್ಪಿಸುವುದೇ ಕಷ್ಟವಾಗುತ್ತದೆ ಅಲ್ಲವೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಚಳುವಳಿ ಯಾವ ಸಂದರ್ಭದಲ್ಲಿ ಮಾಡಿದರೆ ಅದಕ್ಕೆ ಮಾನ್ಯತೆ ಇದೆಯೋ ಆಗ ಮಾಡಿದರೆ ಅದಕ್ಕೆ ಮಾನ್ಯತೆ ಬರುತ್ತೆ. ಆದರೆ ನಿಷ್ಕಾರಣವಾಗಿ ಚಳುವಳಿ ಮಾಡಿದರೆ ಅದಕ್ಕೆ ಮಾನ್ಯತೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಕಾರವಾರ ಜಿಲ್ಲೆಯಲ್ಲಿ ಹಿಂದೆ ಹೆಚ್ಚಾಗಿ ಅರಣ್ಯದ ಭೂಮಿಯನ್ನು ಸಾಗುವಳಿಗೆ ಕೊಡಬೇಕೆಂದು ಮಾಡಿ ಅದರಂತೆ ಅನೇಕ ಜನರಿಗೆ ಭೂಮಿ ಕೊಡಬೇಕೆಂದು ಇಲ್ಲಿನ ಸ್ಥಳೀಯ ಅಧಿಕಾರಿಗಳು ತಕ್ಕ ಕ್ರಮ ತೆಗೆದುಕೊಂಡಿದ್ದಾರೆ. ಸರಕಾರ ಇದರ ಬಗ್ಗೆ ಇನ್ನೂ ಆಖೈರು ತೀರ್ಮಾನ ಕಳುಹಿಸದೇ ಇರುವುದರಿಂದ ಕಷ್ಟವಾಗಿದೆ. ಇದರ ಕಡೆಗೆ ಸರಕಾರ ಗಮನ ಕೊಡುವುದಕ್ಕಾಗುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆಲವು ಕಡೆ ಫಾರೆಸ್ಟು ಭೂಮಿಯನ್ನು ಕೊಟ್ಟಿದ್ದಾರೆ ಮತ್ತು ಈಗಾಗಲೇ ಅವರು ಸಾಗುವಳಿ ಮಾಡುತ್ತಿದ್ದಾರೆ ಮತ್ತು ಕೆಲವು ಕಡೆ ಸ್ವಾಧೀನ ಮಾಡಿಕೊಳ್ಳಲು ಅವರಿಗೆ ಆರ್ಡರು ಕೊಡಲಾಗಿದೆ. ಆದರೆ ಕೆಲವು ಕಡೆಗಳಲ್ಲಿ ಅರಣ್ಯ ಭೂಮಿಯನ್ನು ಕೊಡಬೇಕೆಂದು ಇತ್ತು. ಕೇಂದ್ರ ಸರಕಾರದವರು ಮೈಸೂರು ರಾಜ್ಯದಲ್ಲಿ ಅರಣ್ಯ ಪ್ರದೇಶಗಳ ಬೆಳವಣಿಗೆ ಸಾಲದು, ಇನ್ನೂ ಹೆಚ್ಚು ಕಾಡುಗಳನ್ನು ಬೆಳಸಬೇಕೆಂದು ಹೇಳಿದುದರಿಂದ ಕೆಲವು ಕಡೆ ಕೊಟ್ಟಿರುವ ಅರಣ್ಯ ಭೂಮಿಯನ್ನು ವಾಪಸು ಪಡೆಯಬೇಕೆಂದು ಹುಕುಂ ಕೊಡಲಾಗಿದೆ. ಇದನ್ನು ಕಡ್ಡಾಯವಾಗಿ ಮಾಡಬೇಕಾಗಿ ಬಂದಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇಕಡಾ 80 ಭಾಗ ಅರಣ್ಯದ ಭೂಮಿಗಳಿವೆ. ಇಲ್ಲಿ ಸುಮಾರು ಒಂದು ಲಕ್ಷ ಎಕರೆ ಭೂಮಿಯನ್ನು ನಿರ್ಗತಿಕರಾಗಿರತಕ್ಕ ಬಡವರಿಗೆ, ಕೂಲಿಗಾರರಿಗೆ ಕೊಡಬೇಕೆಂದು ಸರಕಾರ ಒಪ್ಪಿಕೊಂಡಿತ್ತು. ಇದಕ್ಕಾಗಿ ಒಂದು ವಿಶೇಷ ಸಮಿತಿಯನ್ನು ರಚನೆ ಮಾಡಿ ಅದರ ವತಿಯಲ್ಲಿ ಭೂಮಿಯನ್ನು ವಿತರಣೆ ಮಾಡಲಾಗಿತ್ತು. ಹೀಗೆ ವಿಲೇವಾರಿಯಾಗಿರುವ ಭೂಮಿಯನ್ನು ಇಲ್ಲಿರುವ ಬಡಜನರಿಗೆ ಹಂಚುವ ವ್ಯವಸ್ಥೆಯನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಹೇಳುವ ಸಲಹೆಯೇನೋ ಸರಿ. ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ವಿಶೇಷ ಪರಿಸ್ಥಿತಿ ಇದೆ. ಇಲ್ಲಿ ಬಡವರಾಗಿರುವ ಹರಿಜನರು ಹಾಗೂ ಗಿರಿಜನರ ಸಂಖ್ಯೆಯೇ ಜಾಸ್ತಿಯಾಗಿದೆ. ಇಂತಹವರಿಗೆ ಸ್ವಲ್ಪ ರಿಯಾಯಿತಿ ಕೊಡುವುದು ಅವಶ್ಯಕವಾಗಿದೆ. ಇದನ್ನು ಸರಕಾರ ಆಲೋಚನೆ ಮಾಡುತ್ತಿದೆ. ಮತ್ತು ಇದರ ಬಗ್ಗೆ ಕೇಂದ್ರ ಸರಕಾರದೊಡನೆ ವ್ಯವಹಾರ ಮಾಡುತ್ತಿದ್ದೇವೆ.

ಶ್ರೀ ಕೆ. ಎಂ. ಮಂಜುನಾಥ್.—ಸರಕಾರದ ಜಮೀನುಗಳನ್ನ ಅಲ್ಲಿರುವ ಅಧಿಕಾರಿಗಳೇ ಅವರವರಲ್ಲಿ ಹಂಚಿಕೆ ಮಾಡಿಕೊಂಡು ಅರಣ್ಯದ ಹಾಗೂ ಇತರ ಭೂಮಿಗಳನ್ನು ಸಾಗುವಳಿ ಮಾಡುತ್ತಿರುವುದನ್ನು ತಪ್ಪಿಸಲು ಸರಕಾರ ತಕ್ಕ ಕ್ರಮ ತೆಗೆದುಕೊಂಡು ಅಂತಹ ಭೂಮಿಯನ್ನು ಏಕೆ ಖುರಾಸೆ ಮಾಡಬಾರದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರಲ್ಲಿ ಫಾರೆಸ್ಟ್ ಭೂಮಿಗೆ ಸಂಬಂಧಪಟ್ಟದ್ದೊ ಇಲ್ಲವೇ ರೆವೆನ್ಯೂ ಭೂಮಿಯೋ ಅಥವಾ ಬೇರೆ ಯಾವುದಾದರೂ ಸರಕಾರದ ಭೂಮಿಯನ್ನು ಉತ್ತಿದ್ದಾರೋ ಅದನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲು ತಕ್ಕ ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆ. ಆದರೆ ಯಾವ ಸಂದರ್ಭದಲ್ಲಿ ಇವುಗಳನ್ನು ಕೊಡಲಾಗಿದೆ, ಇದನ್ನು ಹೇಗೆ ವಿಚಾರ ಮಾಡಬೇಕೆನ್ನುವುದರ ಬಗ್ಗೆ ಇನ್ನೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ.

ಶ್ರೀ ಕೋಣಂಡೂರು ಲಿಂಗಪ್ಪ.—ಉತ್ತರ ಕನ್ನಡ ಜಿಲ್ಲೆಯಲ್ಲಿ ಜಮೀನನ್ನು ಕೆಲವರಿಗೆ ಕೊಟ್ಟಿರುವುದನ್ನು ವಾಪಸು ಪಡೆಯಬೇಕಾಗುತ್ತದೆ ಎಂದು ಹೇಳಿದರು. ಆದರೆ ಇಲ್ಲಿ ಸಣ್ಣ ಸಣ್ಣ ಗೇಣಿದಾರರು ಹಾಗೂ ಬಡವರಾಗಿರುವವರಿಗೆ ಎರಡು ಎಕರೆಗಳಷ್ಟು ಭೂಮಿ ಮಾತ್ರ ಕೊಟ್ಟಿರುವವರ ಬಗ್ಗೆ ಸರಕಾರದವರು ಸ್ವಲ್ಪ ಯೋಚನೆ ಮಾಡಿ ಅನುಕೂಲವಾಡಿಕೊಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗ ಕೊಟ್ಟಿರುವ ಭೂಮಿಯನ್ನು ವಾಪಸು ಪಡೆಯಲು ಹಾಗೂ ಸಕ್ರಮವಾಗಿ ಭೂಮಿ ಪಡೆದಿರುವವರ ಬಗ್ಗೆ ಜಮೀನು ತೆಗೆದುಕೊಳ್ಳಬೇಕಾದರೆ ಇದಕ್ಕೆ ಕೆಲವು ನಿಯಮಾವಳಿಗಳನ್ನು ಮಾಡಲಾಗಿದೆ. ಜಮೀನು ಇಲ್ಲದೇ ಇರುವವರು ಹಾಗೂ ಬಡವರಾಗಿರುವವರಿಗೆ ಭೂಮಿ ಕೊಟ್ಟಿದ್ದರೆ ಅಥವಾ ಅಕ್ರಮವಾಗಿ ಉತ್ತು ಭೂಮಿ ಮಾಡುತ್ತಿದ್ದರೆ ಅದಕ್ಕೆ ಯಾವ ನಿಯಮಗಳಿವೆಯೋ ಅದನ್ನು ಅನುಸರಿಸಿಕೊಂಡು ಸಕ್ರಮವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ್.—ಫಾರೆಸ್ಟ್ ಲ್ಯಾಂಡ್‌ಗಳು ಅಲ್ಲದೆ ರೆವೆನ್ಯೂ ಲ್ಯಾಂಡುಗಳನ್ನೂ ಅಕ್ರಮವಾಗಿ ಆಕ್ರಮಿಸಿಕೊಂಡು ಸಾಗು ಮಾಡುತ್ತಿರುವುದನ್ನು ತಪ್ಪಿಸಲು ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಷ್ಟು ವರ್ಷಗಳಿಂದ ಫಾರೆಸ್ಟ್ ಲ್ಯಾಂಡುಗಳನ್ನು ತೆಗೆದುಕೊಂಡು ಉಳುತ್ತಿದ್ದಾರೆ ಅದು ನುಲಭವಾಗಿ ಗೊತ್ತಾಗುವುದಿಲ್ಲ. ಫಾರೆಸ್ಟು ಜಮೀನು ಎಂದು ಪಹಣಿ ಬರೆಯುತ್ತಿದ್ದರೆ ಅದರಲ್ಲಿ ಗೊತ್ತಾಗುತ್ತದೆ. ಇದನ್ನು ವಿಲೇಜು ಅಕೌಂಟೆಂಟರುಗಳು ಲೆಕ್ಕದಲ್ಲಿ ಬರೆದಿರಬೇಕು ಮತ್ತು ಎರಡನೆಯದು ಅರಣ್ಯದ ಭೂಮಿ ಎಷ್ಟು ಎಕರೆಗಳಷ್ಟು ಎಂದು ಹೇಳಲು ಅಲ್ಲಿ ಸರ್ವೆ ಕೆಲಸವಾಗಿಲ್ಲ, ಇದನ್ನು ಒಂದು ವರ್ಷದಿಂದ ಸಾಗು ಮಾಡುತ್ತಿದ್ದಾರೋ, ಇಲ್ಲವೇ ಎಷ್ಟು ದಿನದಿಂದ ಅನುಭವಿಸುತ್ತಿದ್ದಾರೆ ಇದನ್ನು ನೋಡಬೇಕಾಗಿದೆ. ಆದುದರಿಂದ ಖಚಿತವಾಗಿ ಈಗಲೇ ಇದರ ಬಗ್ಗೆ ಯಾವುದನ್ನೂ ಹೇಳಲು ಸಾಧ್ಯವಾಗುವುದಿಲ್ಲ.

ಶ್ರೀ ಕೆ. ಪ್ರಭಾಕರ.—ಅಕ್ರಮವಾಗಿ ಸಾಗುವಳಿ ಮಾಡುತ್ತಿರುವವರಿಗೆ ಹಾಗೂ ಬಡವರ ಬಗ್ಗೆ ಅನುಕಂಪ ತೋರಿಸುವುದೇನೋ ಸರಿಯೇ ? ಆದರೆ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಸರಕಾರದ ಜಮೀನುಗಳನ್ನು ಉತ್ತಿದ್ದಾರೆ ಅದನ್ನು ತಿಳಿಯುವುದೇ ಸರಕಾರಕ್ಕೆ ಒಂದು ದೊಡ್ಡ ಸಮಸ್ಯೆ. ಇದಕ್ಕಾಗಿ ಸರಕಾರ ರೆಗ್ಯುಲರೈಸೇಷನ್ ಆಫ್ ಅನ್ ಅಥರೈಸ್ಡ್ ಕಲ್ಟಿವೇಷನ್ ಎನ್ನುವ ಒಂದು ಕಾನೂನು ಕೂಡ ಮಾಡಿ ಅದರ ಮೂಲಕ ಸರಕಾರ ಇದರ ಅಂಕೆ ಸಂಖ್ಯೆಗಳನ್ನು ಪಡೆಯಬೇಕಾದುದು ಅನಿವಾರ್ಯವಾಗಿದೆ. ಸರಕಾರದಲ್ಲಿ ಇಂತಹ ಅಂಕೆ ಸಂಖ್ಯೆಗಳು ಇದೆಯೇ ? ಇದ್ದರೆ ಇದನ್ನು ಇನ್ನೆಷ್ಟು ದಿವಸಗಳಲ್ಲಿ ಇದನ್ನು ಬಗೆಹರಿಸಲು ಸಾಧ್ಯವಾಗುತ್ತದೆ ಎನ್ನುವುದೇ ಇದರಲ್ಲಿರುವ ಪ್ರಶ್ನೆಯಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪರಿಶಿಷ್ಟದಲ್ಲಿ ಒದಗಿಸಿರತಕ್ಕ ಉತ್ತರದ ಪ್ರಕಾರ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ 4967 ಕೇಸುಗಳಿವೆ. ಎಷ್ಟು ಪ್ರದೇಶ ಎನ್ನುವುದು ಸರಿಯಾಗಿ ಗೊತ್ತಿಲ್ಲ. ಏಕೆಂದರೆ ರೆವೆನ್ಯೂ ಭೂಮಿಯಲ್ಲಿ ಸರ್ವೆ ನಂಬರುಗಳನ್ನು ಹೇಳಿದರೆ ಇಷ್ಟು ಎಕರೆ ಎಂದು ಹೇಳಬಹುದು, ಪಹಣಿ ಬರೆಯುತ್ತಿದ್ದರೆ ಇಷ್ಟು ವರ್ಷದಿಂದ ಸಾಗುವಳಿ ಮಾಡುತ್ತಿದ್ದಾರೆಂದು ಹೇಳಬಹುದು, ಇವು ಯಾವುದೂ ಅಂಕಿ ಅಂಶಗಳು ಇಲ್ಲದೆ ಇರುವುದರಿಂದ ಜಮೀನಿಗೆ ಸಂಬಂಧಪಟ್ಟಂತೆ ಅಕ್ರಮ ಸ್ವಾಧೀನ ಗೊತ್ತಾಗುವುದಿಲ್ಲ. ಇದನ್ನು ಗೊತ್ತು ಮಾಡಿ ಯಾವ ಸಂದರ್ಭದಲ್ಲಿ ಅವರಿಗೆ ಖಾಯಂ ಮಾಡಬಹುದು ಎಂದು ನಿರ್ಧರ ಮಾಡುವದಕ್ಕೋಸ್ಕರವೇ ಒಬ್ಬ ಸ್ಪೆಷರ್ ಅಸಿಸ್ಟೆಂಟ್ ಕಮಿಷನರ್ ಫಾರ್ ದರಖಾಸ್ತ್ ಎಂದು ನೇಮಕ ಮಾಡಿ ಡೆಪ್ಯುಟಿ ಕಮಿಷನರಿಗೆ ಇದ್ದ ಅಧಿಕಾರವನ್ನು ಕೊಡಲಾಗಿದೆ. ಅವರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಪಿ. ಎಂ. ಘಾಡಿ.—4967 ಪ್ರಕರಣಗಳಲ್ಲಿ ನಮ್ಮ ರಾಜ್ಯದವರನ್ನು ಬಿಟ್ಟು ಕೇರಳ, ತಮಿಳುನಾಡಿನ ಜನರೂ ಅತಿಕ್ರಮ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ! ಬಂದಿದ್ದರೆ, ಅವರ ಕಡೆಯಿಂದ ಭೂಮಿಯನ್ನು ವಶಪಡಿಸಿಕೊಂಡು ನಮ್ಮ ಜನಗಳಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೈಸೂರು ರಾಜ್ಯದವರಲ್ಲದೆ ಇರುವವರು ಅನೇಕ ಕಡೆ ಮೈಸೂರು ರಾಜ್ಯದಲ್ಲಿ ವಾಸವಿದ್ದಾರೆ. ಎಷ್ಟೆಷ್ಟು ವರ್ಷಗಳಿಂದ ವಾಸವಾಗಿದ್ದಾರೆ ಎಂದು ನೋಡಬೇಕು. ಮೈಸೂರು ರಾಜ್ಯದಲ್ಲಿ ಡಾಮಿಸೈಲ್‌ರಾಗಿದ್ದಂಥವರಿಗೆ ಸರಿಸಮಾನವಾದ ಹಕ್ಕುಗಳು ಬರುತ್ತವೆ. ಇದನ್ನೆಲ್ಲ ನೋಡಿಕೊಂಡು ತೀರ್ಮಾನ ಮಾಡಬೇಕಾಗುತ್ತದೆ.